**OS No. 256/2017**
**ಡಿ.ಡಬ್ಲ್ಯೂಃ 1**

**ದಿನಾಂಕ : 03-09-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಪ್ರತಿವಾದಿ ನಂಬರ 4 ರವರ ಪರ: ಶ್ರೀ. ಎಸ್, ಎಸ್.ಎ . ವಕೀಲರಿಂದಃ**

ನಾನು ಈ ದಿನ ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ರೂಪದಲ್ಲಿ ಸಲ್ಲಿಸುತ್ತಿದ್ದು ಅದನ್ನು ನನ್ನ ಮಾಹಿತಿ ಮೇರೆಗೆ ನನ್ನ ವಕೀಲರು ತಯಾರಿಸಿರುತ್ತಾರೆ. ಅದರಲ್ಲಿ ಬರೆದಿರುವ ಸಂಗತಿಗಳು ನಿಜ ಇರುತ್ತವೆ ಮತ್ತು ಅದರಲ್ಲಿರುವ ಸಹಿ ನನ್ನದಾಗಿರುತ್ತದೆ.

1. ಖಾತಾ ನಕಲು ಮತ್ತು ಕಂದಾಯ ರಶೀದಿಯನ್ನು ನಿಡಿ-87 ಮತ್ತು ನಿಡಿ-88 ಎಂದು ಗುರುತಿಸಲಾಯಿತು.

**ಪಾಟಿ ಸವಾಲು ವಾದಿ ಪರ ಶ್ರೀ ಜಿ. ಎಮ್. ಎಮ್. ವಕೀಲರಿಂದ**

1. ಪ್ರತಿವಾದಿ ನಂಬರ 6 ರವರು ನನಗೆ ಸಂಬಂಧವಿಲ್ಲ. ಪ್ರತಿವಾದಿ ನಂಬರ 1 ರಿಂದ 3 ಮತ್ತು 5 ರವರು ನನ್ನ ಸಂಬಂಧಿಕರು. ವಾದಿ ಸಂಬಂಧಿಕನಲ್ಲ. ದಾವಾ ಆಸ್ತಿಯಲ್ಲಿ 2 ತುಕಡಿ ಇದೆ ಎಂದರೆ ಸರಿ. ಸದರಿ ದಾವಾ ಆಸ್ತಿ ಒಟ್ಟು 1 ಎಕರೆ 12 ಗುಂಟೆ ಇದೆ ಎಂದರೆ ಸರಿ. ದಾವಾ ಆಸ್ತಿಯು ವಾದಿಯ ತಂದೆಯ ಹೆಸರಿನಲ್ಲಿ ಇತ್ತು ಎಂದರೆ ಸರಿ. ದಾವಾ ಆಸ್ತಿಯು ಹಿರಿಯರ ಆಸ್ತಿ ಎಂದರೆ ಸರಿ. ಹಣಮಪ್ಪ ಇವರ ಮರಣದ ನಂತರ ವಾದಿಗೆ ದಾವಾ ಆಸ್ತಿ ಬಂದಿರುತ್ತದೆ ಎಂದರೆ ಸರಿ. ವಾದಿಯು ದಾವಾ ಆಸ್ತಿಯ ಮಾಲೀಕ ಮತ್ತು ಕಬ್ಜೆದಾರ ಇರುತ್ತಾನೆ ಎಂದರೆ ಸರಿ.

2. ನಾನು ವಾದಿಯ ಕಡೆಯಿಂದ ಜಮೀನು ಸುಮಾರು 20 ವರ್ಷದ ಹಿಂದೆ ಖರೀದಿ ಮಾಡಿರುತ್ತೇನೆ. ನನ್ನ ಹತ್ತಿರ ನೊಂದಣಿ ಪತ್ರ ಇದೆ. ನಾನು 1 ಎಕರೆ ಖರೀದಿ ಮಾಡಿರುತ್ತೇನೆ. ನಾನು 1 ಎಕರೆ ಖರೀದಿ ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ವಾದಿಯು ನನಗೆ ಜಮೀನು ಮಾರಾಟ ಮಾಡಿ ನೊಂದಣಿ ಮಾಡಿಕೊಟ್ಟಿರುತ್ತಾನೆ ಎಂದು ಸುಳ್ಳು

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮನೆ ಕಟ್ಟಲು ಪಂಚಾಯತಿ ಕಡೆಯಿಂದ ಪರವಾನಿಗೆ ತೆಗೆದುಕೊಂಡಿರುತ್ತೇನೆ. ನಾನು ದಾಖಲಾತಿಯನ್ನು ಸಲ್ಲಿಸಿರುತ್ತೇನೆ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯ ಮನೆ ಮತ್ತು ಒಕ್ಕಲುತನ ಮಾಡುತ್ತಾನೆ ಎಂದರೆ ಸರಿ. ಸದರಿ ದಾವಾ ಆಸ್ತಿಯಲ್ಲಿ ಮನೆ ಕಟ್ಟಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂಡಾಧಿಕಾರಿಗಳು ಯಾದಗಿರಿ**